ಆ) ಸದರಿ ಅನುದಾನವು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ ರವರಿಂದ ದಿ: 05–03–2015 ರಂದು ಬಿಡುಗಡೆಯಾಗಿರುತ್ತದೆ. ಈ ಅನುದಾನವನ್ನು ಪಂಜಾಬ್ ನ್ಯಾಷನಲ್ ಬ್ಯಾಂಕ್, ಬೆಳಗಾವಿ ಶಾಖೆಗೆ ದಿ: 22.04.2015 ರಂದು ಜಮಾ ಮಾಡಲಾಗಿರುತ್ತದೆ.

ಇ) ದ್ವಿಚಕ್ರ ವಾಹನಗಳ ಖರೀದಿಗೆ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡಿದ್ದು, ನಿಗಧಿತ ಕಾಲಾವಧಿಯ ನಂತರವೇ ನಿಯಮಾನುಸಾರ ಪರಿಶೀಲಿಸಿ ಅಂತಿಮಗೊಳಿಸಬೇಕಾಗುತ್ತದೆ. ಸದರಿ ಯೋಜನೆಯನ್ನು ಜಾರಿಗೊಳಿಸಲು ದಿನಾಂಕ: 20–06–2015ರಂದು ಕಾರ್ಯಾದೇಶ ನೀಡಲಾಗಿದೆ.

ಈ) ಟೆಂಡರ್ ಪ್ರಕ್ರಿಯೆಯನ್ನು ನಿಯಮಾನುಸಾರ ಪೂರ್ಣಗೊಳಿಸಲು ಕಾಲಾವಕಾಶವಾಗಿರುವುದರಿಂದ ಯೋಜನೆಯನ್ನು ಜಾರಿಗೊಳಿಸುವಲ್ಲಿ ಅಧಿಕಾರಿ/ಸಿಬ್ಬಂದಿಗಳು ಯಾವುದೇ ವಿಳಂಬ ನೀತಿಯನ್ನು ಅನುಸರಿಸಿರುವುದಿಲ್ಲ.

ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಕಂದಾಯೇತರ ಗ್ರಾಮಗಳು ಅಭಿವೃದ್ಧಿ

2435(1475); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)

ಅ) 2014–15, 2015–16ನೇ ಸಾಲಿನಲ್ಲಿ ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆ ಮಾಡಲಾದ ಕಂದಾಯ ಗ್ರಾಮಗಳ ಸಂಖ್ಯೆ ಎಷ್ಟು;

ಆ) ಈ ಯೋಜನೆಗೆ ಬಿಡುಗಡೆಯಾದ ಅನುದಾನದ ಮೊತ್ತ ಹಾಗೂ ಖರ್ಚಾದ ಮೊತ್ತವೆಷ್ಟು;

ಇ) ಸದರಿ ಯೋಜನೆಯಡಿಯಲ್ಲಿ ಕಂದಾಯ ಗ್ರಾಮಗಳನ್ನು ಹೊರತುಪಡಿಸಿ ಬೇರೆ ಗ್ರಾಮಗಳನ್ನು ಆಯ್ಕೆ ಮಾಡಿ ಅಭಿವೃದ್ಧಿಪಡಿಸಲು ಸರ್ಕಾರಕ್ಕಿರುವ ಅಡೆತಡೆಗಳೇನು?

ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಗ್ರಾಮ ವಿಕಾಸ ಯೋಜನೆಗೆ ಇದುವರೆವಿಗೂ ಅನುಮೋದನೆಗೆ ಸಲ್ಲಿಸಿದ ಹೊಸದುರ್ಗ ವಿಧಾನಸಭಾ ಕ್ಷೇತ್ರದ 4 ಹಾಗೂ ಮಸ್ಕಿ ವಿಧಾನಸಭಾ ಕ್ಷೇತ್ರದ 5 ಮತ್ತು ಯಲಬುರ್ಗಾ ವಿಧಾನಸಭಾ ಕ್ಷೇತ್ರದ 1 ಗ್ರಾಮವೂ ಸೇರಿದಂತೆ ಒಟ್ಟು 10 ಗ್ರಾಮಗಳಿಗೆ ಅನುಮೋದನೆ ನೀಡಲಾಗಿದೆ.

ಉಳಿದ ಜಿಲ್ಲೆಗಳ ಗ್ರಾಮಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಆ)

- ಈ ಸಾಲಿನಲ್ಲಿ ಸುವರ್ಣ ಗ್ರಾಮೋದಯ ಯೋಜನೆಯ ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಬೇಕಾದ ರೂ. 327.63 ಕೋಟಿಗಳೂ ಸೇರಿದಂತೆ ಹಾಗೂ ಆರಂಭವಾಗಿರುವ ಗ್ರಾಮ ವಿಕಾಸ ಯೋಜನೆಗೂ ಸೇರಿ ರೂ. 445.30 ಕೋಟಿಗಳನ್ನು ನಿಗಧಿಪಡಿಸಲಾಗಿದೆ.
- ಈ ಪೈಕಿ ರೂ. 109.60 ಕೋಟಿಗಳನ್ನು ಬಿಡುಗಡೆ ಮಾಡಿದ್ದು ಪ್ರಾರಂಭಿಕ ಶಿಲ್ಕು ನೇರಿದಂತೆ ಒಟ್ಟು ರೂ. 146.26 ಕೋಟಿಗಳ ಅನುದಾನದಲ್ಲಿ ರೂ. 16.74 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಇ)

- ಗ್ರಾಮ ವಿಕಾಸ ಯೋಜನೆಯಡಿಯಲ್ಲಿ ಕಂದಾಯ ಗ್ರಾಮಗಳನ್ನು ಹೊರತುಪಡಿಸಿ ಬೇರೆ ಗ್ರಾಮಗಳನ್ನು ಆಯ್ಕೆ ಮಾಡಲು ಅಡೆತಡೆಗಳು ಇರುವುದಿಲ್ಲ.

- ಪ್ರತಿ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ರೂ. 3.75 ಕೋಟಿಗಳ ಮಿತಿಯೊಳಗೆ ಎಸ್‌ಸಿ, ಎಸ್‌ಟಿ ಹೆಚ್ಚು ಜನಸಂಖ್ಯೆಯನ್ನೊಳಗೊಂಡ 2 ಗ್ರಾಮಗಳೂ ಸೇರಿದಂತೆ ಗರಿಷ್ಠ 5 ಗ್ರಾಮಗಳನ್ನು ಆಯ್ಕೆ ಮಾಡಲು ಅವಕಾಶ ಕಲ್ಪಿಸಿದೆ.
- 2 ಪೂರ್ಣ ತಾಲ್ಲೂಕುಗಳನ್ನು ಒಳಗೊಂಡಿರುವ 6 ವಿಧಾನಸಭಾ ಕ್ಷೇತ್ರಗಳಿಗೆ ರೂ.6.00 ಕೋಟಿಗಳ ಮಿತಿಯೊಳಗೆ ಎಸ್‌ಸಿ, ಎಸ್‌ಟಿ ಹೆಚ್ಚು ಜನಸಂಖ್ಯೆಯನ್ನೊಳಗೊಂಡ 3 ಗ್ರಾಮಗಳೂ ಸೇರಿದಂತೆ ಗರಿಷ್ಠ 8 ಗ್ರಾಮಗಳನ್ನು ಆಯ್ಕೆ ಮಾಡಲು ಅವಕಾಶ ಕಲ್ಪಿಸಿದೆ.

ರಸ್ತೆಗಳು ಹಾಗೂ ಸೇತುವೆಗಳು

2436(1476); ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು)

ಅ) ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ವಿವಿಧ ಯೋಜನೆಗಳ ರಸ್ತೆಗಳಾವುವು; ಈ ರಸ್ತೆಗಳ ಸರ್ವತೋಮುಖ ಅಭಿವೃದ್ಧಿಗೆ ಬೇಕಾಗುವ ಅನುದಾನ; ಬಿಡುಗಡೆಯಾಗಿರುವ ಹಾಗೂ ವೆಚ್ಚವಾಗಿರುವ ಅನುದಾನವೆಷ್ಟು;

ಆ) ನೀರಾವರಿ ಪ್ರದೇಶಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಮತ್ತು ಒಣ ಬೇಸಾಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ತಾಲ್ಲೂಕುವಾರು ಮಾಹಿತಿ ನೀಡುವುದು;

ಇ) ನೀರಾವರಿ ವ್ಯಾಪ್ತಿಯ ರಸ್ತೆಗಳ ಅಂದಾಜು ಪಟ್ಟಿ ತಯಾರಿಸುವಾಗ ವಾಹನಗಳ ಓಡಾಟ, ಎಷ್ಟು ಟನ್‌ಗಳ ಭಾರದ ವಾಹನಗಳ ಓಡಾಟ ಇದರ ಬಗ್ಗೆ ಗಮನಹರಿಸಿ ಅಂದಾಜು ಪಟ್ಟಿ ತಯಾರಿಸಲಾಗುತ್ತಿದೆಯೇ;

ಈ) ನೀರಾವರಿ ಮತ್ತು ಕಪ್ಪು ಮಣ್ಣಿನ ಭೂಮಿ ಇರುವ ಗ್ರಾಮೀಣ ರಸ್ತೆ ಅಭಿವೃದ್ಧಿಗೆ ಪ್ರತಿ ಕಿಲೋಮೀಟರ್‌ಗೆ ತಗಲುವ ವೆಚ್ಚವೆಷ್ಟು;